Presented on : 25-09-2024
Registered on : 25-09-2024
Decided on : 01-07-2026
Duration : 1 years, 9 months, 6 days

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಗಿರಿ**

**ಉಪಸ್ಥಿತರುಃ**
**ಶ್ರೀ. ವಜ್ರೇಶ ಬಿ.ಎ.,ಎಲ್.ಎಲ್.ಬಿ.**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ**

**ಅಪರಾಧಿಕ ಪ್ರಕರಣಃ 2669/2024**

**ದಿನಾಂಕ 01 ನೇ ಜುಲೈ 2026**

**ಪಿರ್ಯಾದುದಾರರುಃ** ರಾಜ್ಯ ಸರ್ಕಾರ −
ಸಂತೆಬೆನ್ನೂರು ಪೋಲಿಸ್ ಠಾಣೆ.

**(ಪ್ರತಿನಿಧಿಸುವವರು ಸ.ಸ.ಅಭಿಯೋಜಕರು)**

**:ವಿರುದ್ಧಃ**

**ಆರೋಪಿತರುಃ**

1. ಧನಂಜಯ
ಬಿನ್ ನಿಂಗಪ್ಪ,
ವಯಸ್ಸು 44 ವರ್ಷ,
2. ಸುಧಾ
ಬಿನ್ ಧನಂಜಯ,
ವಯಸ್ಸು 39 ವರ್ಷ

ಇಬ್ಬರೂ ವಾಸಃ ಕೆಂಪನಹಳ್ಳಿ ಗ್ರಾಮ,
ಚನ್ನಗಿರಿ ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ ಜಿ.ಎಸ್.ಲೋಹಿತ್ ಕುಮಾರ್ -ವಕೀಲರು)**

| | |
|---|---|
| ಅಪರಾಧ ನಡೆದ ದಿನಾಂಕ | 17.03.2024 |
| ಅಪರಾಧ ವರದಿ ಮಾಡಿದ ದಿನಾಂಕ | 17.03.2024 |
| ದೂರುದಾರರ ಹೆಸರು | ಜ್ಯೋತಿ |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ ದಿನಾಂಕ | 11.06.2026 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | 11.06.2026 |
| ಅಪರಾಧ ಕಲಂಗಳು | ಭಾ.ದಂ.ಸಂ.ಕಲಂ. 504, 324 ಮತ್ತು 506 ಸಹವಾಚಕ ಕಲಂ 34 |
| ತೀರ್ಮಾನ ಹೊರಡಿಸುವ ದಿನಾಂಕ | 01.07.2026 |
| ತೀರ್ಪು | ಆರೋಪದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ. |

ಸಹಿ/-

**(ವಜ್ರೇಶ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

## ತೀರ್ಪು

ಸಂತೆಬೆನ್ನೂರು ಪೋಲಿಸ್ ಠಾಣೆಯ ಸಹಾಯಕ ಆರಕ್ಷಕ ಉಪನೀರಿಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 324 ಮತ್ತು 506 ಸಹವಾಚಕ

ಕಲಂ 34ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನಾ ಪಕ್ಷದ ಪ್ರಕರಣದ ಸಾರಾಂಶವೇನೆಂದರೆಃ**

ದಿನಾಂಕ 17.03.2024 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರಿರುವ ಕೆಂಪನಹಳ್ಳಿ ಗ್ರಾಮದ ಚಾಸಾ.1 ರವರ ಮನೆಯ ಮುಂದಿನ ಜಾಗದಲ್ಲಿ ನೀರು ಹಾಕಿದ ವಿಚಾರದಲ್ಲಿ 1ನೇ ಆರೋಪಿಯು ಚಾಸಾ.4 ರವರಿಗೆ ಏ ಸೂಳೆಮಕ್ಕಳಾ ಯಾವನೋ ನೀರು ಹಾಕಿದ್ದು ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದಾಗ ಯಾಕೆ ನಮಗೆ ಬೈಯುತ್ತೀಯಾ ಎಂದು ಚಾಸಾ.1 ರವರು ಕೇಳಿದ್ದಕ್ಕೆ 1ನೇ ಆರೋಪಿಯು ಏ ಬೋಸೂಡಿ ಮುಂಡೆ ಎಂದು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಜಗಳ ಬಿಡಿಸಲು ಬಂದ ಚಾಸಾ.4 ರವರಿಗೆ ಅಲ್ಲೆ ಇದ್ದ ತೆಂಗಿನ ಮಟ್ಟೆಯಿಂದ ಎಡಗೈ, ಬೆನ್ನಿಗೆ, ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಚಾಸಾ.1 ಮತ್ತು 4 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಆರೋಪಿಸಿರುತ್ತಾರೆ. ದಿನಾಂಕ 17.03.2024 ರಂದು ಚಾಸಾ.1 ರವರು ಲಿಖಿತ ದೂರನ್ನು ದಾಖಲಿಸಿದ ಮೇರೆಗೆ, ಪೊಲೀಸರು ಪ್ರಥಮ ವರ್ತಮಾನ ವರದಿ ಸ್ವೀಕರಿಸಿ ಸಿ.ಆರ್.ಸಂಖ್ಯೆಃ 53/2024 ರಂತೆ ಭಾರತೀಯ ದಂಡ ಸಂಹಿತೆ ಕಲಂ 504, 324 ಮತ್ತು 506 ಸಹವಾಚಕ ಕಲಂ 34 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 324 ಮತ್ತು 506 ಸಹವಾಚಕ ಕಲಂ 34 ರ ಆರೋಪಗಳಿಗೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿದ್ದು, ಜಾಮೀನಿನ ಮೇಲೆ ಬಿಡುಗೊಂಡಿರುತ್ತಾರೆ. ಅಭಿಯೋಜನೆಯ ಪ್ರಕರಣದ ಯಥಾಪ್ರತಿಯನ್ನು ಕಲಂ 207 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ರೀತ್ಯಾ ಒದಗಿಸಲಾಯಿತು.

4. ನ್ಯಾಯಾಲಯವು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 324 ಮತ್ತು 506 ಸಹವಾಚಕ ಕಲಂ 34ರ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿರುತ್ತದೆ. ಆರೋಪಿತರು ತಮ್ಮ ಮೇಲೆ ಹೊರಿಸಲಾದ ಮೇಲ್ಕಂಡ ಅಪರಾಧಗಳನ್ನು ಕೇಳಿ ತಿಳಿದುಕೊಂಡು, ನಿರಾಕರಿಸಿ ವಿಚಾರಣೆ ಆಗಬೇಕೆಂದು ಮಂಡಿಸಿದರು.

5. ಆರೋಪಿತರ ಮೇಲಿನ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನಾ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರು ಫ್ರಾಸಾ.1 ಮತ್ತು 2 ರವರ ಮೌಖಿಕ ಸಾಕ್ಷ್ಯ ವಿಚಾರಣೆಯನ್ನು ಮತ್ತು ನಿಶಾನೆ ಪಿ.1 ರಿಂದ ಪಿ.5 ರವರೆಗೆ ದಾಖಲಾತಿ ಸಾಕ್ಷ್ಯವನ್ನು ನಿಶಾನಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರಿಂದ ಆರೋಪಿತರ ವಿರುದ್ಧ ಯಾವುದೇ ಅಪರಾಧ ಸನ್ನಿವೇಶಗಳು ಮೂಡಿ ಬರದ ಕಾರಣ ಕಲಂ 313 ರ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತರ ಹೇಳಿಕೆಗಳನ್ನು ದಾಖಲಿಸಲು ವಿನಾಯಿತಿ ನೀಡಲಾಯಿತು.

6. ಕಡತದಲ್ಲಿನ ಲಭ್ಯ ದಾಖಲೆಗಳ ಆಧಾರದ ಮೇರೆಗೆ ನ್ಯಾಯಾಲಯಕ್ಕೆ ಪರಿಗಣಿಸಬೇಕಾದ ಅಂಶಗಳು ಈ ಕೆಳಕಂಡಂತೆ ಮೂಡಿ ಬಂದವುಃ

**ಅಂಶಗಳು**

1) ದಿನಾಂಕ 17.03.2024 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಗೆ ಸೇರಿರುವ ಕೆಂಪನಹಳ್ಳಿ ಗ್ರಾಮದ ಚಾಸಾ.1 ರವರ ಮನೆಯ ಮುಂದಿನ ಜಾಗದಲ್ಲಿ ನೀರು ಹಾಕಿದ ವಿಚಾರದಲ್ಲಿ 1 ನೇ ಆರೋಪಿಯು ಚಾಸಾ.4 ರವರಿಗೆ ಏ ಸೂಳೆಮಕ್ಕಳಾ ಯಾವನೋ ನೀರು ಹಾಕಿದ್ದು ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದಾಗ ಯಾಕೆ ನಮಗೆ ಬೈಯುತ್ತೀಯಾ ಎಂದು ಚಾಸಾ.1 ರವರು ಕೇಳಿದ್ದಕ್ಕೆ 1 ನೇ ಆರೋಪಿಯು ಏ ಬೋಸೂಡಿ ಮುಂಡೆ ಎಂದು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

2) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ 1 ನೇ ಆರೋಪಿಯು ಸಮಾನ ಉದ್ದೇಶದಿಂದ ಜಗಳ ಬಿಡಿಸಲು ಬಂದ ಚಾಸಾ.4 ರವರಿಗೆ ಅಲ್ಲೆ ಇದ್ದ ತೆಂಗಿನ ಮಟ್ಟೆಯಿಂದ ಎಡಗೈ, ಬೆನ್ನಿಗೆ, ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು ಹಾಗೂ ಸದರಿ

ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

3) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ 1 ಮತ್ತು 2ನೇ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ಮತ್ತು 4 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

4) ಮಾಡುವ ಆದೇಶವೇನು?

7. ನನ್ನ ತೀರ್ಮಾನಕ್ಕೆ ಉದ್ಭವಿಸಿರುವ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ ಸಂಖ್ಯೆ 1 - ನಕಾರಾತ್ಮಕವಾಗಿ
ಅಂಶ ಸಂಖ್ಯೆ 2 - ನಕಾರಾತ್ಮಕವಾಗಿ
ಅಂಶ ಸಂಖ್ಯೆ 3 - ನಕಾರಾತ್ಮಕವಾಗಿ
ಅಂಶ ಸಂಖ್ಯೆ 4 - ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿಃ

## ಕಾರಣಗಳು

8. **ಅಂಶ ಸಂಖ್ಯೆ 1 ರಿಂದ 3:** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಪುನರಾವರ್ತಿತ ವಿಸ್ತೃತ ಚರ್ಚೆಯನ್ನು ತಡೆಯುವ ಉದ್ದೇಶದಿಂದ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಈ ಪ್ರಕಣರದಲ್ಲಿ ಪಿರ್ಯಾದುದಾರರಾದ ಚಾಸಾ.1/ಜ್ಯೋತಿರವರು ತಮ್ಮ ದೂರಿನಲ್ಲಿ ಆರೋಪಿಸುವುದೇನೆಂದರೆ, ನಮ್ಮ ಗ್ರಾಮದ ನಮಗೆ ನಮ್ಮ ಮಾವನ ಮಕ್ಕಳು ಮತ್ತು ನಾವು ಬೇರೆ ಬೇರೆಯಾಗಿದ್ದು, ಬೇರೆ ಮನೆಯಲ್ಲಿ ವಾಸ ಮಾಡುತ್ತಿರುತ್ತೇವೆ. ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಬೈಕಿನಲ್ಲಿ ಓಡಾಡುತ್ತಿರುವಾಗ 1 ರಿಂದ 3 ನೇ ಆರೋಪಿತರು ಯಾಕೆ ಇಲ್ಲಿ ಓಡಾಡುತ್ತೀರಿ ಅಂತಹ ಪದೇ ಪದೇ ಜಗಳ ತೆಗೆದು ಕೆಟ್ಟ ಭಾಷೆಗಳಿಂದ ಬೈಯುತ್ತಿದ್ದರು. ನಾನು ಮತ್ತು ನನ್ನ ಗಂಡ ಸುಮ್ಮನಾಗಿ ಹೋಗುತ್ತಿದ್ದೆವು. ದಿನಾಂಕ 17.03.2024 ರಂದು ಸಂಜೆ 5.00 ಗಂಟೆ ಸಮಯದಲ್ಲಿ ನನ್ನ ಗಂಡನಾದ ಕರಿಬಸಪ್ಪನು ಅದೇ ರಸ್ತೆಯಲ್ಲಿ ಬೈಕಿನಲ್ಲಿ ಬಂದು ನಮ್ಮ ಮನೆ ಮುಂದೆ ನಿಂತಿರುವಾಗ 1 ನೇ ಆರೋಪಿತನು ಬಂದು ಏನೋ ಸೂಳೆ ಮಗನೇ ನಿಮ್ಮ ಅಪ್ಪನದೇನೋ ಜಾಗ ಅಂತ ಬೈದು ಅಲ್ಲಿಯೇ ಬಿದ್ದಿದ್ದ ತೆಂಗಿನ ಮಟ್ಟೆಯಿಂದ ನನ್ನ ಗಂಡನ ಎಡಗೈಗೆ ಒಡೆದು ರಕ್ತಗಾಯಪಡಿಸಿದ್ದು ಮತ್ತೆ ಅದೇ ಮಟ್ಟೆಯಿಂದ ಬೆನ್ನಿಗೆ ಹೊಡೆದನು. ಆಗ ನಾನು ಬಂದು ಬಿಡಿಸಿದಾಗ ನನಗೆ ಕೆಟ್ಟ ಭಾಷೆಗಳಿಂದ ಬೈದು ಅಲ್ಲಿಯೇ ಬಿದ್ದಿದ್ದ ಕಲ್ಲಿನಿಂದ ನನ್ನ ತಲೆಗೆ ಹೊಡೆದಾಗ ನಮ್ಮ ಗ್ರಾಮದ ಓಬಳೇಶ ಈತನು ಜಗಳ ಬಿಡಿಸಿ ಕಳುಹಿಸಿದನು. 1 ನೇ ಆರೋಪಿತನು ಸೂಳೆ ಮಗನೇ ನಿಮ್ಮನ್ನು ಕೊಲೆ ಮಡುತ್ತೇನೆಂದು ಪ್ರಾಣ ಬೆದರಿಕೆಯನ್ನು

ಹಾಕಿರುವುದಾಗಿ ಆರೋಪಿಸಿ ದೂರನ್ನು ನೀಡಿದ ಮೇರೆಗೆ ಸಂತೆಬೆನ್ನೂರು ಪೊಲೀಸ್ ಠಾಣೆಯವರು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ.

10. ಫ್ರಾಸಾ-01/ಜ್ಯೋತಿ/ಪಿರ್ಯಾದುದಾರರು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.2 ಮತ್ತು 3 ನನ್ನ ಸಂಬಂಧಿಗಳು, ಚಾಸಾ.4 ನನ್ನ ಗಂಡ, 1 ನೇ ಆರೋಪಿ ನನ್ನ ಮೈದುನ. 2 ನೇ ಆರೋಪಿ ನನ್ನ ತಂಗಿ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನಗೆ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಸುಮಾರು ಎರಡು ವರ್ಷಗಳ ಹಿಂದೆ ಆರೋಪಿತರಿಗೂ ಮತ್ತು ನಮಗೂ ಮನೆಯ ಮುಂಭಾಗದ ಜಾಗದಲ್ಲಿ ನೀರು ಹಾಕುವ ವಿಚಾರವಾಗಿ ಮಾತುಕತೆಯಾಗಿತ್ತು ಅಷ್ಟೆ. ಈ ಸಂದರ್ಭದಲ್ಲಿ ಆರೋಪಿತರನ್ನು ಕರೆಯಿಸಿ ಠಾಣೆಗೆ ಬುದ್ದಿ ಹೇಳುವಂತೆ ಕೇಳಿಕೊಂಡಾಗ, ಠಾಣೆಯಲ್ಲಿ ನನ್ನಿಂದ ಕೆಲವು ದಾಖಲಾತಿಗಳಿಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ, ಯಾವ ದಾಖಲೆಗಳಿಗೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ನುಡಿಯುತ್ತಾರೆ.

11. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗ, ಸಾಕ್ಷಿಯು ಅಭಿಯೋಜನೆಯ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಚಾಸಾ.1 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಗಿದೆ.

12. ಫ್ರಾಸಾ-02/ಕರಿಬಸಪ್ಪ/ನೊಂದ ಸಾಕ್ಷಿದಾರರು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.2 ಮತ್ತು 3 ನನ್ನ ಸಂಬಂಧಿಗಳು, ಚಾಸಾ.1 ನನ್ನ ಹೆಂಡತಿ, 1 ನೇ ಆರೋಪಿ ನನ್ನ ತಮ್ಮ. 2 ನೇ ಆರೋಪಿ ನನ್ನ ತಮ್ಮನ ಹೆಂಡತಿ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನಗೆ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ. ಚಾಸಾ.1 ರವರು ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದಿರುವ ತೆಂಗಿನ ಮಟ್ಟೆಯನ್ನು ನಾನು ಈ ಹಿಂದೆ ನೋಡಿಲ್ಲ ಹಾಗೂ ಪೊಲೀಸರ ಮುಂದೆ ನಾನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

13. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗ, ಸಾಕ್ಷಿಯು ಅಭಿಯೋಜನೆಯ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಚಾಸಾ.4 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಗಿದೆ.

14. ಸದರಿ ಫ್ರಾಸಾ-1 ಮತ್ತು 2 ರವರನ್ನು ಅಭಿಯೋಜನಾ ಪಕ್ಷವು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗಲೂ ಸಹ ಆರೋಪಿತರ ವಿರುದ್ಧ ನಂಬಲಾರ್ಹ ಸಾಕ್ಷ್ಯವನ್ನು ಸಾಬೀತುಪಡಿಸಲು ವಿಫಲವಾಗಿದೆ. ಈ ಅಂಶವನ್ನು ಮನಗಂಡು ವಿಚಾರಣೆಗೆ

ಒಳಪಡಿಸಿದ ಸಾಕ್ಷಿದಾರರು ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದು ಇನ್ನುಳಿದ ಸಾಕ್ಷಿದಾರರ ವಿಚಾರಣೆಯಿಂದ ಯಾವುದೇ ಉದ್ದೇಶ ಈಡೇರದ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಕೋರಿದ ಕೋರಿಕೆಯನ್ನು ಮೇಲ್ಕಂಡ ಕಾರಣಗಳಿಗಾಗಿ ನ್ಯಾಯಾಲಯ ನಿರಾಕರಿಸಿರುತ್ತದೆ.

15. ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಅಭಿಯೋಜನೆಯ ಪ್ರಕರಣವನ್ನು ಫ್ರಾಸಾ.1 ರವರು/ಪಿರ್ಯಾದುದಾರರು/ ಮತ್ತು ಫ್ರಾಸಾ.2 ರವರು/ನೊಂದ ಸಾಕ್ಷಿ ಮತ್ತು ಕೃತ್ಯ ಸ್ಥಳದ ಪಂಚನಾಮೆ ಸಾಕ್ಷಿ ಆಗಿದ್ದರೂ ಕೂಡ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ತನ್ನ ಪ್ರಕರಣವನ್ನು ನಿಸ್ಸಂದೇಹವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಮೇಲ್ಕಂಡ **ಅಂಶ ಸಂಖ್ಯೆ 1 ರಿಂದ 3** ಅನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

16. **ಅಂಶ ಸಂಖ್ಯೆ 4**: ಈ ಮೇಲ್ಕಂಡ ಚರ್ಚೆಗಳ ಆಧಾರದಂತೆ, ಈ ಕೆಳಕಂಡಂತೆ ಆದೇಶಿಸಿದೆ.

## **ಆದೇಶ**

ಅಪರಾಧಿಕ ಪ್ರಕ್ರಿಯೆ ಸಂಹಿತೆ ಕಲಂ.248(1) ರಂತೆ ಪ್ರದತ್ತವಾದ ಅಧಿಕಾರದಂತೆ ಆರೋಪಿತರ ವಿರುದ್ಧ ಹೂಡಲಾದ ಶಿಕ್ಷಾರ್ಹ ಅಪರಾಧಗಳಾದ ಭಾರತೀಯ ದಂಡ ಸಂಹಿತೆ ಕಲಂ 504, 324 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ದಾಖಲಾದ

ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಆರೋಪಿಗಳ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಮೇಲ್ಮನವಿ ಅವಧಿಯವರೆವಿಗೂ ಜಾರಿಯಲ್ಲಿರುತ್ತದೆ.

ಈ ಪ್ರಕರಣದಲ್ಲಿ ಮಾಲುಪಟ್ಟಿ ಸಂಖ್ಯೆ 20/2024 ರಂತೆ ಅಮಾನತ್ತುಪಡಿಸಿಕೊಳ್ಳಲಾದ ತೆಂಗಿನ ಮಟ್ಟೆ ನಿರುಪಯುಕ್ತವಾಗಿದ್ದು, ಈ ಪ್ರಕರಣದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ 01 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

ಸಹಿ/-

**(ವಜ್ರೇಶ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

**ಅನುಬಂಧ**

**1. ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಪ್ರಾಸಾ-1/ಚಾಸಾ-1 - ಜ್ಯೋತಿ

ಪ್ರಾಸಾ-2/ಚಾಸಾ-4 - ಕರಿಬಸಪ್ಪ

**2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ:**

ನಿಪಿ-1 - ದೂರು

ನಿಪಿ-2 - ಸ್ಥಳ ಮಹಜರ್

ನಿಪಿ−3 − ಫ್ರಾಸಾ.1 ರವರ ಹೇಳಿಕೆ

ನಿಪಿ−4 − ಭಾವಚಿತ್ರ

ನಿಪಿ−5 − ಫ್ರಾಸಾ.2 ರವರ ಹೇಳಿಕೆ

**3. ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರಃ**

− ಇಲ್ಲ −

**4. ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರಃ**

− ಇಲ್ಲ −

**5. ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿಃ**

− ಇಲ್ಲ −

ಸಹಿ/−

**(ವಜ್ರೇಶ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**